ಶ್ರೀ ಅಜೀಜ್‌ಸೇಟ್.—1132 ಜನ ಕೆಲಸಗಾರರು ಆಲ್ಯೂಮಿನಿಯಂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದೆ. ತಾವು ದರ್ಜೆಗಳನ್ನು ಕೇಳಿದೆ ಇದ್ದರೂಸಹಿತ, ದರ್ಜೆ ಯಾವು ಯಾವುವು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ತರಿಸಿದೆ. ಅದೇ ರೀತಿ ಉತ್ತರ ಕೊಟ್ಟಿದ್ದೇವೆ.

Class I Category.—Number of members of other castes employed 45.

Category II.—Persons of other castes employed 40.

Category III.—Scheduled Caste 16, Scheduled Tribes 5 other Castes 565.

Category IV.—Scheduled Caste seven, Scheduled Tribes 21 other Castes 433. Total: 1132. ಇರುವ ಸಮಾಚಾರವನ್ನು ಮಾನ್ಯ ಸದಸ್ಯರ ಎದುರಿಗೆ ಇಟ್ಟಿದ್ದೇನೆ. 18 ಪರ್ಸೆಂಟ್ ರಿಸರ್ವೇಷನ್ ಬಗ್ಗೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ವಿಷಯವನ್ನು ಮಾನ್ಯ ಸದಸ್ಯರು ತಿಳಿಸಿದರು. ಇದು ಪಬ್ಲಿಕ್ ಸೆಕ್ಟಾರ್‌ಗೆ ಅನ್ವಯಿಸುತ್ತದೆಯೇ ವಿನಹ ಪ್ರೈವೇಟ್ ಸೆಕ್ಟಾರ್‌ಗೆ ಬರುವುದಿಲ್ಲ. ಕಾನ್‌ಷ್ಟಿಟ್ಯೂಷನ್ ಪ್ರಕಾರ 18 ಪರ್ಸೆಂಟ್ ರಿಸರ್ವೇಷನ್ ಏನು ಎಂದು ಹೇಳಿದ್ದಾರೆ, ಅದಕ್ಕೆ ಸರ್ಕಾರ ತರೆಬಾಗಿ ನಡೆಯುವುದಕ್ಕೆ ಪ್ರಯತ್ನ ಪಡುತ್ತದೆ. ಪ್ರೈವೇಟ್ ಸೆಕ್ಟಾರ್‌ನವರು ಮಾನ್ಯತೆ ಮಾಡುವುದು ಬಿಡುವುದು ಅವರಿಗೆ ಸೇರಿದ್ದು. ದೇವರು ಅವರಿಗೆ ಒಳ್ಳೆಯ ಬುದ್ಧಿ ಕೊಡಲಿ ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಸಪ್ಲಿಮೆಂಟರಿ ಪ್ರಶ್ನೆಗೆ ಉತ್ತರ ಕೊಡುವಾಗ ಎಂಪ್ಲಾಯ್‌ಮೆಂಟಿನಲ್ಲಿ 18 ಪರ್ಸೆಂಟ್ ರಿಸರ್ವೇಷನ್ ಬಗ್ಗೆ ಹೇಳಿದರು. ರಿಸರ್ವ್ ಮಾಡದೆ ಇರುವವರಿಗೆ ಲೈಸೆನ್ಸ್ ಏತಕ್ಕೆ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ, ಲೈಸೆನ್ಸ್ ನಾವು ಕೊಟ್ಟಿದ್ದು ಅಲ್ಲ ಹಿಂದಿನ ಸರ್ಕಾರ ಕೊಟ್ಟಿದ್ದು ಎಂದು ಹೇಳಿದ್ದಾರೆ. ಈ ಸರ್ಕಾರ ಇನ್ನು ಮುಂದೆ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳಿಗೆ ಲೈಸೆನ್ಸ್ ಕೊಡತಕ್ಕ ಕಾಲದಲ್ಲಿ 18 ಪರ್ಸೆಂಟ್ ರಿಸರ್ವೇಷನ್ ಇಡುವ ಶರತ್ತನ್ನು ಹಾಕಿ ಕೊಡುತ್ತೀರಾ ?

Sri H. M. CHANNABASAPPA.—We will see that the Constitutional provisions are respected.

Sri H. D. DEVE GOWDA.—I want categorical reply from the Hon'ble Minister, whether he is going to incorporate it ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಾಜ್ಯಾಂಗದಲ್ಲಿ ಅದು ಮಾಡಬೇಕು ಎಂದು ನಿರ್ದಿಷ್ಟವಾಗಿ ವ್ಯವಸ್ಥೆ ಆಗಿದ್ದ ಪಕ್ಷದಲ್ಲಿ ಅಗತ್ಯವಾಗಿ ಮಾಡುತ್ತೇವೆ.

ಶ್ರೀ ಪಿ. ಪಿ. ಹೆಗಡೆ.—ಖಾಸಗಿ ರಂಗಕ್ಕೆ ಲೈಸೆನ್ಸ್ ಕೊಡುವಾಗ ಅದನ್ನು ಕರಾರಿನಲ್ಲಿ ಹಾಕಬೇಕು.

ಶ್ರೀ ಅಜೀಜ್ ಸೇಟ್.—ಸರ್ಕಾರ ಅದನ್ನು ಹಾಕುವ ಸಂದರ್ಭ ಇದ್ದರೆ, ಹಾಕೋಣ, ಹಾಕದೆ ಇರುವ ಸಂದರ್ಭದಲ್ಲಿ ಹಾಕೋದಿಲ್ಲ.

LABOUR UNREST IN SOME PARTS OF THE STATE

458. Sri KONANDUR LINGAPPA (Thirthahalli):—

Will the Minister for Labour be pleased to state:—

(*a*) whether it has come to the notice of the Government that there is unrest in some parts of the State due to labour troubles recently; (for Example: Bhadravathi, H.M.T.);

(*b*) if so, whether Government have taken any steps in this behalf ?

Sri AZEEZ SAIT (Minister for Labour).—

(*a*) Yes.

(*b*) Appropriate action is taken.

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮ ಸರಕಾರ ಬಂದಮೇಲೆ ಈ ರೀತಿ ಕಾರ್ಮಿಕರ ಅಶಾಂತಿ ರಾಜ್ಯದಲ್ಲಿ ಹೆಚ್ಚಿ ಆಲ್ಲಲ್ಲಿ ಗಲಾಟೆಯಾಗಲು ಕಾರಣವೇನು?

†ಶ್ರೀ ಅಜೀಜ್ ಸೇಟ್.—ಅದಕ್ಕೆ ರಾಜಕಾರಣಗಳ ಹಿನ್ನೆಲೆ ಇರುವುದೆಂದು ಅರ್ಥವಾಗುವುದು.

ಶ್ರೀ ಎಸ್. ಬಂಗಾರಪ್ಪ.—ಉತ್ತರದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಎಂದಿದೆ. ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗಿದೆ? ದೊಣ್ಣೆ, ಕಲ್ಲು, ಬಂದೂಕ ಮುಂತಾದ್ದೆಲ್ಲಾ ಅದರಲ್ಲಿ ಸೇರಿದೆಯೇ?

ಶ್ರೀ ಅಜೀಜ್ ಸೇಟ್.—ನಮ್ಮಲ್ಲಿ ಕಲ್ಲು-ದೊಣ್ಣೆ ಇಲ್ಲ, ಬಂದೂಕ ಇದೆ. ಇಲ್ಲವೆಂದು ಹೇಳುವುದಿಲ್ಲ. ತಾವು ಕೇಳುವ ಪ್ರಶ್ನೆ ಎಲ್ಲಾ ತೀರ್ಮಾನವಾಗಿ ಕೆಲಸಗಾರರು ಕಾರ್ಖಾನೆಯಲ್ಲ ಶಾಂತಿಯಿಂದ ಕೆಲಸಮಾಡುತ್ತಿದ್ದಾರೆ. ಶಾಂತಿ ನೆಲಸಿದ ನಂತರ ಈ ಪ್ರಶ್ನೆ ಕೇಳುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ಇತ್ತೀಚೆಗೆ ಭದ್ರಾವತಿಯಲ್ಲಿ ಕಾರ್ಮಿಕರ ಅಶಾಂತತೆಗೆ, ಗಲಾಟೆಗೆ ಶಾಸನ ಸಭೆಯ ಒಬ್ಬ ಸದಸ್ಯರು ಕಾರಣ ಎಂದು ಪತ್ರಿಕೆಯಲ್ಲಿ ವರದಿಯಾತದೆ. ಅವರ ಮೇಲೇನು ಕ್ರಮ ಕೈಕೊಳ್ಳಲಾಗಿದೆ?

ಶ್ರೀ ಅಜೀಜ್‌ಸೇಟ್ —ತಮಗೆ ಆ ರೀತಿ ಸಮಾಚಾರ ಬಂದಿದ್ದರೆ ನನ್ನನ್ನೇಕೆ ಕೇಳುವುದು. ನನಗೆ ಬಂದಿರುವ ಸಮಾಚಾರದ ಪ್ರಕಾರ ಅಲ್ಲಿ ಶಾಂತಿ ನೆಲಸಿ ಕೆಲಸ ನಡೆಯುತ್ತಿದೆ.

AMOUNT EARMARKED FOR SCHEDULED CASTES/ SCHEDULED TRIBES BY TALUK DEVELOPMENT COUNCILS.

541. Sri D. NARAYAN DASS (Harapanahalli).—

Will the Minister for Community Development and Social Welfare be pleased to state:—

(*a*) the number of Taluk Development Councils of Bellary District which have earmarked 18 per cent amount for Scheduled Castes/Scheduled Tribes according to the Constitution;

(*b*) the action the Government would take against such Taluk Development Councils which do not spend 18 per cent amount on the Scheduled Castes/Scheduled Tribes;

(*c*) whether the Government intend to take action to earmark 18 per cent of the amount compulsorily in future;

(*d*) whether the payment of grants to such of the Development Councils would be stopped which do not implement this system?

Sri M. MALLIKARJUNASWAMY (Minister for Community Development and Social Welfare).—

(*a*) All the eight Development Councils of Bellary District have earmarked 18 per cent amount.